ಶ್ರೀ ಕೆ. ಕೆಂಚಪ್ಪ.—ಅವರು ಕೇಳಿರುವ ಜಮೀನನ್ನು ಅಕ್ವೈರ್ ಮಾಡುವುದರಿಂದ ವ್ಯವಸಾಯಕ್ಕೆ ಅನಾನುಕೂಲವಾಗುತ್ತದೆಂಬುದು ತಮ್ಮ ಅಭಿಪ್ರಾಯವೇ, ಅಥವಾ ವ್ಯವಸಾಯಕ್ಕೆ ಅನಾನುಕೂಲವಾದರೂ ಊರಿನ ಪಕ್ಕದಲ್ಲಿರುವ ಜಮೀನನ್ನು ಕೊಡಬೇಕೆಂಬುದು ತಮ್ಮ ಅಭಿಪ್ರಾಯವೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಯಾವ ರೀತಿಯ ಅಭಿಪ್ರಾಯವನ್ನೂ ಪಟ್ಟಿಲ್ಲ. ಆದಷ್ಟು ಬೇಗನೆ ಅವರಿಗೆ ಜಮೀನನ್ನು ಕೊಡಬೇಕೆಂದು ಅಭಿಪ್ರಾಯ ಪಡುತ್ತೇವೆ.

Sri J. B. MALLARADHYA.—Is it the opinion of the Government that this is not for a public purpose ? Merely because it is the opinion of the Sub-Division Officer, should that prevail in acquisition records ?

Sri R. CHENNIGARAMAIAH.—That is the opinion of the Sub-Division Officer. But that is not the final opinion. We have got to go further into the matter.

Sri J. B. MALLARADHYA.—What prevents the Government from taking a decision in the face of the records ?

Sri R. CHENNIGARAMAIAH.—Acquisition records have not yet been built up.

Sri J. B. MALLARADHYA.—What is the difficulty now that is before the Government ? Is not the acquisition record final with the opinion furnished by the Sub-Division Officer ?

Sri R. CHENNIGARAMAIAH.—There is no difficulty for the Government. The Harijans wanted a particular land to be acquired. According to the Sub-Division Officer who went and inspected the place, there are some objections from some ryots, etc. He therefore reported that that land is not convenient. He submitted that some other land might be acquired. But the Harijans are not accepting.

Sri J. B. MALLARADHYA.—Whether it is for a public purpose or not—is it not the only consideration ? Is the Government going to be guided by that consideration or by any other consideration ?

Sri R. CHENNIGARAMAIAH.—Yes. Public purpose.

ಶ್ರೀ ಎ. ಮುನಿಯಪ್ಪ.—ಈ ಜಮೀನಿನಲ್ಲಿ ಹತ್ತು ವರ್ಷಗಳಿಂದ ಏನೂ ಬೆಳೆಯಾಗಿಲ್ಲವೆಂದು ಹೇಳುತ್ತೀನೆ. ಅದಕ್ಕೆ ಏನು ಹೇಳುತ್ತೀರಿ ?

ಶ್ರೀ ಆರ್. ಚೆನ್ನಿಗರಾಮಯ್ಯ.—ನಾನು ನೋಡದೆ ಇರುವುದರಿಂದ ಏನೂ ಹೇಳುವ ಹಾಗಿಲ್ಲ. ನೀವು ಹೇಳಿದರೆ ಒಪ್ಪಿಕೊಳ್ಳಬೇಕಾಗುತ್ತದೆ.

ಶ್ರೀ ಎ. ಮುನಿಯಪ್ಪ.—ಈ ಗ್ರಾಮದ ವಿಷಯದಲ್ಲಿ ನಾನೆ ತಾನೇ ಹೇಳಿದ್ದೇನೆ. ಹರಿಜನರು ಹೂವು ಮುಡಿಯಬಾರದು ಮುಂತಾಗಿ ಏನೇನೋ ತೊಂದರೆಗಳನ್ನು ಕೊಡುತ್ತಿರುವವರು ಈ ಗ್ರಾಮದ ಜನರೇ. ಇದೇ ರೀತಿಯ ದೃಷ್ಟಿಯನ್ನಿಟ್ಟುಕೊಂಡು ಅವರು ಸಬ್ ಡಿವಿಜ಼ನ್ ಅಧಿಕಾರಿಗಳೊಂದಿಗೆ ಮಾತನಾಡಿ, ಅವರಿಗೆ ಪ್ರೋತ್ಸಾಹ ಕೊಟ್ಟು ಆ ಜಮೀನು ಹರಿಜನರಿಗೆ ಅನುಕೂಲವಾಗದಿರುವ ಹಾಗೆ ಮಾಡಿದ್ದಾರೆನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಮಾನ್ಯ ಸದಸ್ಯರು ಹೇಳುವುದನ್ನು ನೋಡಿದರೆ ಸರಿಯಾಗಿ ರಿಪೋರ್ಟ್ ಮಾಡಿದ್ದಾರೆಯೇ ಎನ್ನುವ ಅನುಮಾನ ಬರುತ್ತದೆ. ಮತ್ತೆ ಪರಿಶೀಲನೆ ಮಾಡಿಸುತ್ತೇವೆ.

ಶ್ರೀ ಎ. ಮುನಿಯಪ್ಪ.—ಡಿಪ್ಯೂಟಿ ಕ್ಲಾಸ್ ಕಮಿಷನರ್ ಅವರು ಸ್ಥಳ ಪರಿಶೀಲನೆ ಮಾಡಿ ವರದಿ ಕಳುಹಿಸಲು ಸರ್ಕಾರದವರು ಕ್ರಮ ತೆಗೆದುಕೊಳ್ಳುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಆರ್. ಚೆನ್ನಿಗರಾಮಯ್ಯ.—ತಕ್ಷಣ ಮಾಡುತ್ತೇವೆ.

Government lands given to Mandya Sugar Company, Limited.

Q.—2739. **Smt. RATHNAMMA MADHAV RAO** (Shimoga).—

Will the Government be pleased to state :—

(*a*) the total number of acres of Government land given to Mandya Sugar Company, Ltd., so far (separate figures may be furnished with respect to the lands given as outright grant and on lease) ;

(*b*) the number of acres of lands required by the Company for the purpose of growing sugarcane to enable the factory to run to full capacity ?

A.—**Sri C. M. POONACHA** (Minister for Home Affairs and Industries).—

(*a*) 1. Lands given as outright grant :

Acres		*Guntas*
2,772	...	21

2. Lands given under lease :

Acres		*Guntas*
86	...	0

(*b*) 10,000 Acres.

ಶ್ರೀಮತಿ ರತ್ನಮ್ಮ ಮಾಧವರಾವ್.—ಕಾರ್ಖಾನೆಯವರು ಕೇಳಿದಷ್ಟು ಜಮೀನನ್ನು ಮಂಜೂರು ಮಾಡಲಾಗಿದೆಯೇ ಅಥವಾ ಅವಕಾಶವಿದ್ದಷ್ಟು ಜಮೀನನ್ನು ಮಂಜೂರು ಮಾಡಲಾಗಿದೆಯೇ ?

*ಶ್ರೀ ಸಿ. ಎಂ. ಪೂಣಚ್ಚ.—ಅವರು ಕೇಳಿದಷ್ಟು ಜಮೀನನ್ನು ಕೊಡಲು ಸಾಧ್ಯವಾಗಲಿಲ್ಲ. ಅವಕಾಶ ವಿದ್ದಷ್ಟು ಸ್ಥಳವನ್ನು ಅವರಿಗೆ ಒದಗಿಸಿಕೊಡಲಾಯಿತು.

ಶ್ರೀಮತಿ ರತ್ನಮ್ಮ ಮಾಧವರಾವ್.—ಜಮೀನನ್ನು ಮುಂಜೂರು ಮಾಡಿದಾಗ ಗಣನೆಗೆ ತೆಗೆದುಕೊಂಡ ಅಂಶಗಳು ಯಾವುವು ?

ಶ್ರೀ ಸಿ. ಎಂ. ಪೂಣಚ್ಚ.—ಕಾರ್ಖಾನೆಯವರಿಗೆ ಎರಡು ವಿಷಯಕ್ಕೋಸ್ಕರ ಜಮೀನು ಬೇಕಾಗುತ್ತದೆ. ಒಂದು ಕಬ್ಬಿನ ಬೆಳೆಯನ್ನು ಬೆಳೆಸಲು ಮತ್ತು ಇನ್ನೊಂದು ಕಬ್ಬಿನ ಬಿತ್ತನೆಯನ್ನು ಬೇರೆಯವರಿಗೆ ಒದಗಿಸಲಕ್ಕೆ ಕಬ್ಬನ್ನು ಬೆಳೆಸಲು ಜಮೀನು ಬೇಕಾಗುತ್ತದೆ. ಕೆಲವು ಭಾಗ ಪರಿಶೋಧನೆಗೆ ಕೂಡ ಬೇಕಾಗುತ್ತದೆ. ಈ ಎಲ್ಲ ಕಾರಣಗಳಿಗೋಸ್ಕರ ಜಮೀನನ್ನು ಒದಗಿಸಿಕೊಡಬೇಕಾಯಿತು.

ಶ್ರೀಮತಿ ರತ್ನಮ್ಮ ಮಾಧವರಾವ್.—ಇರ್ವಿನ್ ನಾಲಾ ಪ್ರದೇಶದಲ್ಲಿ, ಕಾರ್ಖಾನೆಗೆ ಬೇಕಾಗಿರುವ ಕಬ್ಬಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಕಬ್ಬಿನ ಬೆಳೆಯಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ಆ ಪ್ರದೇಶದಲ್ಲಿ ಹೆಚ್ಚಿನ ಬೆಳೆಯಾಗುತ್ತಿದೆ.

ಶ್ರೀಮತಿ ರತ್ನಮ್ಮ ಮಾಧವರಾವ್.—ಈ ಕಾರಣದಿಂದ ರೈತರಿಗೆ ನಷ್ಟವುಂಟಾಗುತ್ತಿರುವ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ಹೆಚ್ಚಿನ ಬೆಳೆ ಆದರೆ ನಷ್ಟ ಏಕೆ ಬರಬೇಕು ? ನಷ್ಟವಾಗುವುದಕ್ಕೆ ಕಾರಣವಿಲ್ಲ.

Sri A. BHEEMAPPA NAIK.—Is the grant of 5,000 acres in consonance with the socialistic pattern of society ?

Sri C. M. POONACHA.—In the first instance, there is no question of 5,000 acres. It is not here. Only 2,772 acres have been given and these lands were granted on 15 different occasions between the years 1937 and 1955. I must say on my own behalf that there is nothing which offends the principles of socialistic pattern.

Sri A. BHEEMAPPA NAIK.—What is the total grant of land given to the Sugar Company upto today ?

Mr. SPEAKER.—The answer is printed—2,772 acres and 21 guntas.

Sri C. K. RAJAIAH SETTY.—In the answer it is stated that the factory would require 10,000 acres of land to run to full capacity. May I know whether the factory is not running to full capacity ?

Sri C. M. POONACHA.—The point is, for crushing a capacity of one thousand tons per day, the total requirement would be in the order of 3,50,000 tons. To produce that, 10,000 acres' area should be planted on the estimate that each acre would give an yield of approximately 35 tons. That is the calculation on which the answer is furnished.

Sri C. K. RAJAIAH SETTY.—Are the Government aware that this supply is compensated by the supply by the ryots ?

Sri C. M. POONACHA.—It only relates to the total area that is required to be under sugar-cane cultivation to feed the factory, *i.e.*, 10,000 acres.

Sri C. K. RAJAIAH SETTY.—I would like to know whether the factory is runing to its full capacity by the supply of sugar-cane by the ryots and by the factory's cultivation ?

Sri C. M. POONACHA.—The total requirement for the factory is being met at present.

ಶ್ರೀ ಜಿ. ಎಸ್. ಬೊಮ್ಮೇಗೌಡ.—2858 ಎಕರೆ ಜಮೀನನ್ನು ಹಿಂದೆ ಕೊಡುವಾಗ ರೈತರು ಸಾಕಾದಷ್ಟು ಕಬ್ಬು ಬೆಳೆಯುವುದಿಲ್ಲವಾದ್ದರಿಂದ ಕಾರ್ಖಾನೆಗೆ ಜಮೀನು ಇರಲಿ ಎಂದು ಕೊಟ್ಟಿರುವುದು. ಈಗ ರೈತರು ಸಾಕಾದಷ್ಟು ಕಬ್ಬನ್ನು ಬೆಳೆಯುತ್ತಿರುವುದರಿಂದ ಈ ಜಮೀನಿನ ಅಗತ್ಯವಿಲ್ಲವೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ಇದರಲ್ಲಿ 2,772 ಎಕರೆ 21 ಗುಂಟೆ ಜಮೀನನ್ನು outright grant ಆಗಿ ಕೊಟ್ಟು ಅವರಿಗೆ ವಹಿಸಿಬಿಟ್ಟಿದ್ದೇವೆ. ಆದುದರಿಂದ ಆ ಜಮೀನನ್ನು ತೆಗೆದುಕೊಳ್ಳಬೇಕಾದರೆ ಅಕ್ವೈರ್ ಮಾಡಬೇಕೇ ವಿನಾ ಹಾಗೆಯೇ ಹಿಂದಕ್ಕೆ ಪಡೆಯುವುದಕ್ಕೆ ಅವಕಾಶವಿಲ್ಲ. ಅಕ್ವೈರ್ ಮಾಡಬೇಕೆಂದು ಹೇಳುವಷ್ಟರಮಟ್ಟಿಗೆ ಪ್ರಬಲವಾದ ಕಾರಣಗಳು ಈಗ ಸರ್ಕಾರಕ್ಕೆ ಕಂಡುಬರುತ್ತಿಲ್ಲ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಈ ಜಮೀನಿನಿಂದ ಕಾರ್ಖಾನೆಗೆ ಪ್ರತಿವರ್ಷವೂ ಐದು ಲಕ್ಷ ರೂಪಾಯಿ ನಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ಆ ವಿಷಯವನ್ನು ಪರಿಶೀಲನೆ ಮಾಡಿ ನೋಡಬೇಕು.

ಶ್ರೀ ಬಿ. ಚಾಮಯ್ಯ.—ಇರ್ವಿನ್ ನಾಲಾ ಪ್ರದೇಶದಲ್ಲಿ ರೈತರು ಎಷ್ಟು ಎಕರೆ ಜಮೀನಿನಲ್ಲಿ ಕಬ್ಬು ಬೆಳೆಯುತ್ತಿದ್ದಾರೆ ?

Sri C. M. POONACHA.—I would like to have notice of that question. I have not got the answer.

Sri J. B. MALLARADHYA.—Are the Sugar Factory people growing sugarcane on all these 2,772 acres and 21 guntas of land ?

Sri C. M. POONACHA.—As I said, some areas are reservsd for experimental purposes, some for share cuttings and in the rest of the area, they grow sugar-cane.

Sri J. B. MALLARADHYA.—So the majority of the area granted to the Sugar Factory is planted with sugarcane. Will Government kindly give the break up figures ?

Sri C. M. POONACHA.—I do not have those figures. I will try to get them.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಸರ್ಕಾರದಿಂದ ಮಂಜೂರು ಮಾಡಿರುವ ಜಮೀನಿಗಿಂತಲೂ ಇನ್ನೂ ಹೆಚ್ಚು ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿಕೊಂಡು ಅಕ್ಕಪಕ್ಕದ ಗ್ರಾಮಗಳ ರೈತರಿಗೆ ಜಮೀನಿಲ್ಲದಂತೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ಮಾನ್ಯ ಸದಸ್ಯರು ಆ ರೀತಿಯ ಪ್ರಶ್ನೆ ಕೊಟ್ಟಲ್ಲಿ ಅದಕ್ಕೆ ನಾನು ಸರಿಯಾದ ಉತ್ತರವನ್ನು ಒದಗಿಸುತ್ತೇನೆ ಅಥವಾ ಬೇರೆ ಮಾಹಿತಿ ಬೇಕಾದರೂ ಪರಿಶೀಲನೆ ಮಾಡಿ ಒದಗಿಸುತ್ತೇನೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಒಪ್ಪಿಗೆಯಾಗಿರುವುದು ಮತ್ತು ಒಪ್ಪಿಗೆ ಇಲ್ಲದೆ ಇರುವುದು ಎರಡೂ ಸೇರಿ ಒಟ್ಟು 17,000 ಎಕರೆಯವರೆಗೆ ರೈತರು ಕಬ್ಬನ್ನು ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ಬೆಳೆಯುತ್ತಾರೆ ಮತ್ತು ಕೆಲವು ಪ್ರಮಾಣದಲ್ಲಿ ಬೆಲ್ಲದ ತಯಾರಿಕೆಗೆ ಉಪಯೋಗಿಸಿಕೊಳ್ಳುತ್ತಿದ್ದಾರೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಈ 250 ಎಕರೆ ಕಂಪೆನಿಯ ಜಮೀನನ್ನು ಜಮೀನಿಲ್ಲದ ರೈತರಿಗೆ ವಿತರಣೆ ಮಾಡುವುದಕ್ಕೆ ಸರ್ಕಾರದವರು ಆರ್ಡರ್ ಮಾಡುತ್ತಾರೆಯೇ?

ಶ್ರೀ ಸಿ. ಎಂ. ಪೂಣಚ್ಚ.—ಅದು ಈ ಪ್ರಶ್ನೆಯಿಂದ ಉದ್ಭವಿಸುವುದಿಲ್ಲ. ಪ್ರತ್ಯೇಕವಾಗಿ ಆಲೋಚನೆಮಾಡಬೇಕು.

Sri C. J. MUCKANNAPPA.—What interest the Government have in the Mysore Sugar Company, Mandya ?

ಅಧ್ಯಕ್ಷರು.—ಆ ಪ್ರಶ್ನೆ ಇಲ್ಲಿ ಬರುವುದಿಲ್ಲ.

Sri C. J. MUCKANNAPPA.—What is the percentage of shares that the Government holds ?

Mr. SPEAKER.—You are not properly framing it.

ಶ್ರೀ ಬಿ. ಎಚ್. ಬೋರಣ್ಣಗೌಡ.—ಈ ರೈತರು ಬೆಳೆಯುತಕ್ಕ ಕಬ್ಬನ್ನು ಫ್ಯಾಕ್ಟರಿಯವರು ತೆಗೆದುಕೊಳ್ಳುತ್ತೇವೆಂದು ಅಗ್ರಿಮೆಂಟ್ ಮಾಡಿಕೊಂಡಿದ್ದರೂ ತೆಗೆದುಕೊಳ್ಳದಿರುವುದಕ್ಕೆ ಕಾರಣವೇನು ?

ಅಧ್ಯಕ್ಷರು.—ಅದು ಇಲ್ಲಿ ಬರುವುದಿಲ್ಲ.

Sri U. M. MADAPPA.—Was this land given to the Company free of cost ?

Sri C. M. POONACHA.—No. The land value was recovered at the rate ranging from Rs. 200 to 500 per acre.

Sri U. M. MADAPPA.—May I know the purpose for which it was given ?

Sri C. M. POONACHA.—I have already explained, partly for cultivation, partly for seedlings and partly for experimental purpose.

Sri A. R. BADRI NARAYAN.—It is reported that the Sugar Company is willing to surrender this area of the land.

Sri C. M. POONACHA.—I will have to make an enquiry and find out.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ 2,800 ಎಕರೆ ಜಮೀನು ಕೊಟ್ಟದ್ದು ಯಾವ ಇಸವಿಯಲ್ಲಿ ?

ಶ್ರೀ ಸಿ ಎಂ. ಪೂಣಚ್ಚ.—1937ನೆಯ ಇಸವಿಯಿಂದ 1955ನೆಯ ಇಸವಿಯವರೆಗೆ ಕೊಂಚ ಕೊಂಚವಾಗಿ ಕೊಟ್ಟಿದೆಯೆಂದು ರಿಕಾರ್ಡಿನಲ್ಲಿದೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಪಾಳೆಯಗಾರರ ಕಾಲದಲ್ಲೇ ಅಥವಾ ಜವಾಬ್ದಾರಿ ಸರ್ಕಾರದ ಕಾಲದಲ್ಲೇ?

ಶ್ರೀ ಸಿ. ಎಂ. ಪೂಣಚ್ಚ.—ಯಾವ ಕಾಲದಲ್ಲೆಂದು ತಾವೇ ಯೋಚನೆಮಾಡಬಹುದು.

Dr. R. NAGAN GOWDA.—May I know if this area of 2,700 and odd acres is cultivated by the Factory or part of it is given over on lease and if cultivated, what is the profit they are making?

Sri C. M. POONACHA.—I would like to have notice of that question because I do not have those break up figures with me.

ಶ್ರೀ ಜಿ. ವೆಂಕಟೇಗೌಡ.—ರೈತರು ತಮ್ಮ ಜಮೀನಿನಲ್ಲಿ ಬೆಳೆಯತಕ್ಕ ಕಬ್ಬಿನ ಪ್ರಮಾಣಕ್ಕೂ ಫ್ಯಾಕ್ಟರಿಯವರು ಬೆಳೆಯತಕ್ಕ ಕಬ್ಬಿನ ಪ್ರಮಾಣಕ್ಕೂ ವ್ಯತ್ಯಾಸ ಎಷ್ಟೆಯೆಂಬುದು ಗೊತ್ತಿದೆಯೇ ? Yield per acre ನಲ್ಲಿ ವ್ಯತ್ಯಾಸವಿದೆಯೆಂಬುದು ಗೊತ್ತಿದೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ಗೊತ್ತಿಲ್ಲ.

Sri J. H. SHAMSUDDIN.—Did any consideration of public interest prompt Government to grant this area to this Company ?

Sri C. M. POONACHA.—Yes.

Sri J. B. MALLARADHYA.—Have the Sugar Company people violated any conditions of the original grant ?

Sri C M. POONACHA.—As I was mentioning, the grants were made as many as fifteen times during the course of the years between 1937 and 1955 and I do not know whether any conditions were imposed at the time of the grant. I will have to study the records separately.

Sri J. B. MALLARADHYA.—At least in respect of the 86 acres what is this lease business ? What do the Government mean by saying that they have given it on lease ; what is the idea of this lease ?

Sri H. K. VEERANNA GOWDH.—Since I come from that area, I know a few more details. When it started working, the area was not fully developed and further, as the Minister for Industries said, they wanted certain plots for experimental purposes, for supplying seeds to the ryots. Therefore, certain

area of fallow land belonging to Government was given to the Sugar Company. Some portion was given by way of outright grant and some other plots were given on lease at the low rate of Rs. 29 per acre per year and this lease was for thirty years and it is almost over. The Sugar Company have surrendered a portion of the leased lands. The lands were given to the Company at an upset price of Rs. 200 to 500. Formerly, Government had fixed an upset price of Rs. 200. The Company or private individuals could pay to the Government and then take the land. Since then it has been increased steadily from Rs. 200 to Rs. 300 and onwards. Now it is Rs. 800 per acre. Therefore, the Company was given at various stages certain area of land for an upset price ranging from Rs. 200 to 500. The Company own 1,600 acres of their own and they have got a farm and are growing sugarcane. The rest of the land was given on lease. The lands have been leased and they have been cultivated for over 20 years and they are all fertile. Government are thinking of disposing of those lands to landless persons, and in the grant of lands, those people who were engaged by the Company and who have been turned out of profession also are preferred. This is the position.

Sri J. B. MALLARADHYA.—So the idea is that the Sugar Company has sub-leased the lands. It amounts to the fact that the Factory has given it on sub-lease.

Sri H. K. VEERANNA GOWDH.—Government gave those lands on lease basis at Rs. 29 per acre per year to the Sugar Factory. The Sugar Factory people established colonies; they appointed staff, Manager, Superintendent and servants; they got the lands cultivated. There were as many as 19 farms in the whole area.

Loans granted under the Low Income Group Housing Scheme.

Q.—3385. Sri V. P. DEENADAYALU NAIDU (Cubbonpet).—

Will the Government be pleased to state:—

(*a*) the limit of loan granted under the Low Income Group Housing Scheme;

(*b*) whether it is not a fact that the limit of Rs. 8,000 was fixed two or three years ago;

(*c*) whether they are aware of the increase in the cost of construction by at least 20 per cent since the inception of the Scheme, due to rise in the prices of cement, steel and petrol;

(*d*) if so, whether they propose to urge upon the Central Government to increase the said limit upto Rs. 10,000?

A.—Sri R. CHENNIGARAMAIAH (Minister for Local Self-Government).—

(*a*) The loan assistance admissible is limited to 80 per cent of the capital cost of the house inclusive of land subject to a maximum Rs. 8,000 per house.

(*b*) It was fixed three years ago.

(*b*) The cost of construction has increased to a little extent.

(*d*) The question was already moved with the Government of India. But they were not agreeable to raise the limit.

Sri V. P. DEENADAYALU NAIDU.—How many types are built under the Low Income Group Housing Scheme and what is the cost of each design?

*Sri R. CHENNIGARAMAIAH.—I do not know of the design. It depends upon the individual design given to the Housing Board. They will construct according to the design given.

Sri V. P. DEENADAYALU NAIDU.—Is it not a fact that there are only three types—A, B and C and what is the cost of each type?

Sri R. CHENNIGARAMAIAH.—I do not know. Out of Rs. 10,000 towards the total cost of houses and site, the lessee should advance Rs. 2,000 and the balance of 8,000 will be treated by the Housing Board as loan.

Sri V. P. DEENADAYALU NAIDU.—You have prescribed A, B and C Types and each house costs only Rs. 2,500. Can you build any house in these days in Bangalore at a cost of Rs. 2,500 under the Low Income Group Housing Scheme?